(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಬಂಡೆಪ್ಪ ಖಾಶೆಂಪೂರ್‌ರವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು :– ನಿನ್ನೆ ದಿನ ಬಂಡೆಪ್ಪ ಖಾಶಂಪೂರ್‌ರವರು ಈ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಇದು ಹೊಸ ವಿಷಯವಾಗಿದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮೊದಲು ನಾನು ಗಮನ ಸೆಳೆಯುವ ಸೂಚನೆಯನ್ನು ಕೇಳಿರುವ ಬಗ್ಗೆ ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು :– ನಿನ್ನೆ ಈ ಬಗ್ಗೆ ಮಾತನಾಡಿ ಆಗಿದೆ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ :– ಇವರು ಆಮೇಲೆ ಮಾತನಾಡಲಿ. ಮೊದಲು ಸಚಿವರು ಉತ್ತರವನ್ನು ಕೊಡಲಿ. ಅವರು ಉತ್ತರ ಕೊಟ್ಟ ನಂತರ ಇವರು ಕೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ನಿನ್ನೆ ದಿನ ಈ ವಿಷಯದ ಬಗ್ಗೆ ಸಾಕಷ್ಟು ಪ್ರಸ್ತಾಪವಾಗಿದೆ. ಅಲ್ಲಿ ಸಮಸ್ಯೆ ಏನಿದೆ ಎಂದು ಗೊತ್ತಿದೆ. ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಲಿ. ಅದು ಆದ ನಂತರ ನೋಡೋಣ.

6. ವಿಷಯ : ತೊಗರಿ ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸಚಿವರಿಂದ ಉತ್ತರ

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ಕೃಷಿ ಮತ್ತು ಆಹಾರ ಸಂಸ್ಕರಣೆ ಸಚಿವರು) :– ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ತೊಗರಿ ಬೆಂಬಲ ಬೆಲೆಯ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಸಂಬಂಧ ಎಲ್ಲರೂ ಬಾವಿಗೆ ಬಂದು ಮುಷ್ಕರ ಮಾಡುವಂತಹ ಮಟ್ಟಕ್ಕೆ ಹೋಗುವಂತಹ ಸಂದರ್ಭದಲ್ಲಿ ಈ ಬಗ್ಗೆ ಸರ್ಕಾರವು ಮರುಚಿಂತನೆಯನ್ನು ಮಾಡಿ ಇಡೀ ದೇಶದಲ್ಲಿ ಅತ್ಯುತ್ತಮ ತೊಗರಿ ಬೆಳೆಯನ್ನು ಬೆಳೆಯುವಂತಹ ರಾಜ್ಯ ಯಾವುದು ಎಂದರೆ ಕರ್ನಾಟಕ ರಾಜ್ಯ. ಈ ತೊಗರಿಬೆಳೆ ಇವತ್ತು 6 ಲಕ್ಷ ಹೆಕ್ಟರ್‌ನಲ್ಲಿ 20 ಲಕ್ಷ ಕ್ವಿಂಟಾಲ್ ತೊಗರಿಯನ್ನು ಬೆಳೆಯುವಂತಹ ಸಂದರ್ಭದಲ್ಲಿ ಒಂದು ಕಡೆ ಬರಗಾಲದ

ಛಾಯೆ ಇದೆ. ಇನ್ನೊಂದು ಕಡೆ ಬೆಲೆ ಕುಸಿತದ ನಡುವೆಯೂ ಇವತ್ತು ರೈತರು ತೊಂದರೆಗೆ ಸಿಕ್ಕಿಹಾಕಿಕೊಳ್ಳಬಾರದು ಎಂದು ರಾಜ್ಯ ಸರ್ಕಾರವು ರೈತರಿಗೆ ಬೆಂಬಲ ಬೆಲೆಯನ್ನು ಘೋಷಣೆಯನ್ನು ಮಾಡಿ market intervene ಮಾಡಿದ್ದರೂ ಸಹ ಇವತ್ತು ಬೆಲೆ ಏರಿಕೆ ಕಂಡು ಬಾರದೆ ಇರುವಂತಹ ಸಂದರ್ಭದಲ್ಲಿ ನಾವು ಬೆಲೆಯನ್ನು ಕೊಟ್ಟಿರುವುದು ನಿಜ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಯನ್ನು ಮಾಡುತ್ತೇನೆ ಹಾಗೂ ಈ ಸದನದ ಮುಖೇನ ನಮ್ಮ ವಿರೋಧಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡುತ್ತೇನೆ. ಮೊದಲನೆಯದಾಗಿ ಇವತ್ತು ಕೇಂದ್ರ ಸರ್ಕಾರವು ಕಳೆದ 5 ವರ್ಷಗಳಿಂದ ತೊಗರಿ ಬೆಳೆಯನ್ನು ಅಮದು ಮಾಡಿಕೊಳ್ಳುತ್ತಿದ್ದರು. ಇದರ ಪರಿಣಾಮವಾಗಿ ಈ ರಾಜ್ಯದ ರೈತರ ಮೇಲೆ ಸಾಕಷ್ಟು ತೊಂದರೆಯಾಗಿ ಗಂಭೀರವಾದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ನಾನು ಸದನದ ಮುಖಾಂತರ ಎಲ್ಲರಲ್ಲಿ ವಿನಂತಿಯನ್ನು ಮಾಡುತ್ತೇನೆ. ಈ ಸದನದಲ್ಲಿ ಈ ತೊಗರಿ ಬೆಳೆಯನ್ನು import ಮಾಡುವುದನ್ನು ಸ್ಥಗಿತಗೊಳಿಸುವುದನ್ನು ಖಂಡಿಸಬೇಕೆಂದು ಹೇಳಿ ಈ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕಾಗಿದೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿಯನ್ನು ಮಾಡುತ್ತೇನೆ. ಈ ಸದನದಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ಮಂಡಿಸಿ ಅದನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸೋಣ. ಅದು ಅಲ್ಲದೆ ಸದನವು ಮುಗಿದ ತಕ್ಷಣ ಕೇಂದ್ರ ಸರ್ಕಾರಕ್ಕೆ ತೊಗರಿ ಬೆಳೆಯುವಂತಹ ಭಾಗದ ಜನಪ್ರತಿನಿಧಿಗಳು ಮತ್ತು ವಿರೋಧ ಪಕ್ಷದ ನಾಯಕರು, ಉಪನಾಯಕರುಗಳೆಲ್ಲರನ್ನು ಕರೆದುಕೊಂಡು ಈ ತೊಗರಿ ಬೆಂಬಲ ಬೆಲೆಗೆ ಕಾಯಕ ಬರಬೇಕು ಮತ್ತು import ಮಾಡುವುದನ್ನು ಕೂಡಲೇ ಸ್ಥಗಿತಗೊಳಿಸಬೇಕೆಂದು ಒತ್ತಾಯ ಮಾಡುವ ಬಗ್ಗೆ ನಾವೆಲ್ಲರೂ ನಿಯೋಗ ಹೋಗೋಣವೆಂದು ವಿನಂತಿಯನ್ನು ಮಾಡುತ್ತೇನೆ. ಅಲ್ಲಿಯವರೆಗೆ ತೊಗರಿ ಬೆಳೆಯ ಖರೀದಿಯನ್ನು 16 ಕೇಂದ್ರಗಳಲ್ಲಿ ನಾವು ಪ್ರಾರಂಭ ಮಾಡುತ್ತೇವೆ. ಆದರೆ ಈ ಬಗ್ಗೆ 8–10 ದಿವಸದೊಳಗೆ ಅವರು ಕ್ರಮವನ್ನು ಕೈಗೊಳ್ಳದಿದ್ದರೆ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಾವು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಈ ನಿರ್ಣಯ ಮಂಡನೆ ಮತ್ತು ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗುವಂತಹದ್ದು ಅಲ್ಲಿಯವರೆಗೆ ನಾವು ಒಂದು ವಾರ ಅಥವಾ 10 ದಿವಸದೊಳಗೆ ಇನ್ನೂ 10 ಕೋಟಿ ರೂಪಾಯಿಯ ತೊಗರಿಯನ್ನು 16 ಕೇಂದ್ರಗಳಿಂದ ಖರೀದಿ ಮಾಡುವಂತಹ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ. ಆದರೆ ಈ ತೊಗರಿಯನ್ನು ಆಮದು ಮಾಡುವುದು ಬ್ಯಾನ್ ಆಗದೇ ಇದ್ದರೆ ನಾವು ಇದನ್ನು ಮುಂದುವರೆಸುವುದಕ್ಕೆ

ಸಾಧ್ಯವಾಗುವುದಿಲ್ಲ. ನಾವು ರಾಜ್ಯದ ಆರ್ಥಿಕ ಇತಿಮಿತಿಯೊಳಗಡೆ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಈ ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ರೈತರು ತೊಂದರೆ ಸಿಕ್ಕಿಹಾಕಿಕೊಂಡಿರುವಂತಹ ಸಂದರ್ಭದಲ್ಲಿ ಅವರ ಬೆಂಬಲಕ್ಕೆ ನಿಂತಂಹ ಯಾವುದಾದರೂ ಸರ್ಕಾರ ಇದ್ದರೆ ಅದು ಕರ್ನಾಟಕ ಸರ್ಕಾರವಾಗಿದೆ. ಅದು ಉಳ್ಳಾಗಡ್ಡಿಯಾಗಿರಬಹುದು. ಭತ್ತ ಆಗಿರಬಹುದು. ತೊಗರಿ ಆಗಿರಬಹುದು ಹಾಗೂ ಇನ್ನಿತರ ಎಲ್ಲಾ ಬೆಲೆ ಕುಸಿತ ಕಂಡಾಗ ಅವರ ಸಹಾಯಕ್ಕೆ ಬಂದಂತಹ ಸರ್ಕಾರ ಇವತ್ತು ನಾವು ತೊಗರಿ ಬೆಳೆಯು ಕುಸಿತ ಆಗಿರುವುದರಿಂದ ಅವರ ಸಹಾಯಕ್ಕೆ ಹೋಗುವಂತಹ ತೀರ್ಮಾನವನ್ನು ಮಾಡಿ ದೇಶದಲ್ಲಿ ಯಾವುದೇ ರಾಜ್ಯವು ಮಾಡದೆ ಇದ್ದರು. ಕರ್ನಾಟಕ ರಾಜ್ಯದಲ್ಲಿ ತೊಗರಿ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆಯನ್ನು ಮಾಡಿ ನಾವು ಖರೀದಿಯನ್ನು ಮಾಡುವಂತಹ ಸಂದರ್ಭದಲ್ಲಿ ಇವತ್ತಿಗೂ ಸಹ import ಆದಂತಹ ತೊಗರಿಗೆ 2100 ರೂಪಾಯಿಗೆ Madras port ನಲ್ಲಿ ಬರುತ್ತಿದೆ. ಕೂಡಲೆ ಅದು ಬರುವುದನ್ನು ಬ್ಯಾನ್ ಮಾಡಿಸಬೇಕು. ಇದನ್ನು ಸದನವು ಖಂಡಿಸಬೇಕು. ನಾವು ತೊಗರಿ ಬೆಳೆಯ ಖರೀದಿಯನ್ನು ಪ್ರಾರಂಭ ಮಾಡುತ್ತೇವೆ. ಇನ್ನು 8–10 ದಿವಸದಲ್ಲಿ ಇನ್ನೂ 10 ಕೋಟಿ ರೂಪಾಯಿಗಳಷ್ಟು ಖರೀದಿಯನ್ನು ಪ್ರಾರಂಭ ಮಾಡುತ್ತೇವೆ. ನಾವು ಖರೀದಿ ಮಾಡಿದ್ದೇವೆ. ಇನ್ನೂ 25,000 ಕ್ವಿಂಟಾಲ್‌ನಷ್ಟು ನಾವು ಖರೀದಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ತೊಗರಿ ಬೆಳೆ import ಆಗುವುದು ಬ್ಯಾನ್ ಆಗದೆ ಇದ್ದರೆ. ನಾವು ಇದನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ತಮ್ಮ ಮುಖೇನ ಸದನಕ್ಕೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ವಿರೋಧ ಪಕ್ಷದ ಉಪನಾಯಕರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಾನು ಈ ವಿಚಾರದಲ್ಲಿ ನಿನ್ನೆಯಿಂದ ನಡೆದಿರುವಂತಹ ಚರ್ಚೆಗಳೆಲ್ಲವನ್ನು ಕೇಳಿದ್ದೇನೆ. ದಯಮಾಡಿ ನಾವು market intervention ಎನ್ನುವಂತಹದ್ದು. it is a very good concept and it is a very good weapon also. ನಾನು ಈ ಹಿಂದೆ ಸಚಿವರಾದಂತಹ ಸಂದರ್ಭದಲ್ಲಿ market intervention ಮಾಡಿದ ಮೇಲೆಯೇ ಕುಸಿದಿರುವಂತಹ ಬೆಲೆಗಳು ಜಾಸ್ತಿಯಾಗುವುದಕ್ಕೆ ಸಾಧ್ಯವಾಯಿತು. ಅದರೆ ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಇಲ್ಲಿ ಬೆಲೆಯು ಜಾಸ್ತಿಯಾಗಲಿಲ್ಲ. ದಯಮಾಡಿ ತಾವು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ತಾವು ಏನು ಈಗ ಹೇಳುತ್ತಿದ್ದೀರಿ. ಈಗ import ನಿಂದ

ಬರುತ್ತಿರುವಂತಹ ತೊಗರಿ ಬೆಳೆಯಿಂದಾಗಿ ಈ ಪರಿಸ್ಥಿತಿ ಉದ್ಭವಿಸಿದೆ ಎಂದು ಹೇಳಬೇಕಾದಾಗ ನೀವು ಲಿಖಿತವಾಗಿ ಕೊಟ್ಟಿರುವಂತಹ ಉತ್ತರದಲ್ಲಿ ಆ ವಿಚಾರವು ಪ್ರಸ್ತಾಪವಾಗಲಿಲ್ಲ. ಇನ್ನು ಎರಡನೇಯದಾಗಿ ಒಂದು ಲೋಪವನ್ನು ಎತ್ತುತ್ತಿದ್ದೇನೆ. ಸರ್ಕಾರವು ಒಂದು ಲಿಖಿತವಾದ ಹೇಳಿಕೆಯನ್ನು ಕೊಡಬೇಕಾದಾಗ ಇದರ ಬಗ್ಗೆ ಪೂರ್ವಭಾವಿಯಾಗಿ ಎಲ್ಲಾ ರೀತಿಯಾದಂತಹ ಚಿಂತನೆಯನ್ನು ಮಾಡಿ ಕೊಡಬೇಕಾಗುತ್ತದೆ ಇದರ ಲಿಖಿತವಾಗಿ ಕೊಡುವಂತಹ ಸಂದೇಶವು ಕಡತದಲ್ಲಿರುತ್ತದೆ. ಪತ್ರಿಕೆಯಲ್ಲಿ ಬರುವುದು ಬೇರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಭಾನಾಯಕರು ಕೂಡ ಸದನದಲ್ಲಿದ್ದಾರೆ. ನೀವು ಉತ್ತರದಲ್ಲಿ ಏನು ಹೇಳಿದ್ದೀರಿ. ಮಂಡಳಿಯ ವತಿಯಿಂದ ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮದಡಿ, ಇದುವರೆಗೂ ರೂ. 11.73 ಕೋಟಿ ವೆಚ್ಚವನ್ನು ಭರಿಸಿ ಜರುಗತ್ತಿರುವ ಖರೀದಿ ಕಾರ್ಯಾಚರಣೆಯಿಂದ ಮಾರುಕಟ್ಟೆಯಲ್ಲಿ ಮಾದರಿ ದರವು ಹೆಚ್ಚಿರುವುದಿಲ್ಲ. You are clearly admitting. ಇಲ್ಲಿ ಆನ್ಯಾಯವು ರೈತರಿಗೆ ಆಗುತ್ತಿದೆ. ಸಣ್ಣ ಮತ್ತು ಮಧ್ಯಮ ರೈತರ ಸಮುದಾಯಕ್ಕೆ ಹೆಚ್ಚಿನ ನಿರೀಕ್ಷಿತ ಲಾಭ ನೀಡುವುದು ಸಾಧ್ಯವಾಗುತ್ತಿಲ್ಲ. ಅಂದರೆ ಸರ್ಕಾರವು ಸೋಲನ್ನು ಒಪ್ಪಿಕೊಳ್ಳುತ್ತಿದೆಯಾ ? ಮಂಡಳಿಯು ಸಾಲವನ್ನು ಪಡೆದು ಖರೀದಿಸುವಲ್ಲಿ ಹಾಗೂ ಅತಿ ಹೆಚ್ಚಿನ ದರದಲ್ಲಿ ಖರೀದಿಸಲಾದ ತೊಗರಿಗೆ ನಿರೀಕ್ಷಿತ ಮಾರಾಟ ದರ ದೊರೆಯದ್ದಿದ್ದಲ್ಲಿ ಮಂಡಳಿಯು ಹೆಚ್ಚಿನ ನಷ್ಟವನ್ನು ಅನುಭವಿಸುವ ಸಂಭವವಿರುತ್ತದೆ. ತೊಗರಿ ಮಂಡಳಿಯನ್ನು ಮಾಡಿರುವುದು ನನ್ನ ಕಾಲದಲ್ಲಿ. ಆ ಮಂಡಳಿಯ ಉದ್ದೇಶವೇನು ? ಅಲ್ಲಿಗೆ ಅದು ಸಾಬೀತಾಗಲಿಲ್ಲ. ಮಂಡಳಿಗೆ ಲಾಭ ಇರಬೇಕೆನ್ನುವಂತಹ ಕಾರಣಕೋಸ್ಕರ ನಷ್ಟವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ರೈತನಿಗೆ ಅನ್ಯಾಯವಾದರೂ ಪರವಾಗಿಲ್ಲ. ಎನ್ನುವಂತಹ ಭಾವನೆಯು ಬರುತ್ತದೆ. ದಯಮಾಡಿ ನಾನು ಈ ಬಗ್ಗೆ ಹೇಳುತ್ತೇನೆ. FAQ ಗುಣಮಟ್ಟದ ತೊಗರಿಯನ್ನು ರೈತರು ತಂದುಕೊಡುತ್ತಿಲ್ಲವೆಂದು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆಗೆ FAQ ಗುಣಮಟ್ಟದ ತೊಗರಿಯನ್ನು ಕ್ವಿಂಟಾಲ್‌ಗೆ ರೂ. 4000–00 ಗಳಂತೆ ಕೊಂಡುಕೊಂಡಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತೀರಿ. ಆಮೇಲೆ ಎಲ್ಲೋ ಒಂದು ಕಡೆಗೆ ಮಧ್ಯವರ್ತಿಗಳು, ದಲ್ಲಾಳಿಗಳು ಬಂದು ಲಾಭ ಪಡೆಯುತ್ತಿದ್ದಾರೆಂದು ಹೇಳಬೇಕಾದಾಗ ಇದನ್ನು ನಿಯಂತ್ರಣವನ್ನು ಮಾಡುವಂತಹ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ದಯಮಾಡಿ ನಾನು ಹೇಳುತ್ತಿರುವುದು ಇಲ್ಲಿ ಆಕ್ಷೇಪ ಎತ್ತುತ್ತಿರುವುದು ಸರ್ಕಾರವು ಈ ರೀತಿಯಾಗಿ ಉತ್ತರವನ್ನು ಕೊಡುವಂತಹದ್ದು ಅಲ್ಲ.

ದಯಮಾಡಿ ನಾನು ಈ ಬಗ್ಗೆ ಒಂದು ಸಲಹೆಯನ್ನು ಕೊಡುತ್ತೇನೆ. ನೀವು import duty ಯಿಂದ ಈ ರೀತಿಯಾಗಿದೆ ಎಂದು ಲಿಖಿತವಾಗಿ ಕೊಟ್ಟಿರುವಂತಹ answer ನಲ್ಲಿಲ್ಲ. ನೀವು ಅದನ್ನು ಈಗ ಹೇಳುತ್ತಿದ್ದೀರಿ. ಅದು ವಾಸ್ತವಿಕಾನೋ ಅಲ್ಲವೋ ಎನ್ನುವಂತಹ ಮಾಹಿತಿಯ ಬಗ್ಗೆ ಅದು ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎಂದು ಹೇಳಬೇಕಾಗುತ್ತದೆ. ಒಂದು ಪಕ್ಷ ಅದು ಪರಿಣಾಮ ಬೀರಿದ್ದೇ ಆದರೆ ಅದರ ಬಗ್ಗೆ ನಾವು ಖಂಡಿತವಾಗಿಯೂ ಕೇಂದ್ರ ಸರ್ಕಾರದ ಮುಂದೆ ಹೋಗಬೇಕಾಗುತ್ತದೆ. ಈ ಬಗ್ಗೆ ನಾವು ಹೋರಾಟವನ್ನು ಮಾಡಬೇಕಾಗುತ್ತದೆ. ಆ ವಿಚಾರದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯ ಬೇಡ. ಇವತ್ತು. ಅತ್ಯಂತ ಶ್ರೇಷ್ಠ ಮಟ್ಟದ higesht protein ಇರುವಂತಹ ತೊಗರಿ ಎಂದರೆ ಇಡೀ ದೇಶದಲ್ಲಿ ಗುಲ್ಬರ್ಗಾ, ರಾಯಚೂರು ಮತ್ತು ಬೀದರ್‌ನಲ್ಲಿ ಬರುವಂತಹದ್ದು. ಇನ್ನು ಒಂದು ಮಾತನ್ನು ನಾನು ಹೇಳುತ್ತೇನೆ. ಉತ್ತರ ಭಾರತದಲ್ಲಿ ಬೆಳಯುವಂತಹ ತೊಗರಿ ಏನಿದೆ ಅದರಲ್ಲಿ there is an element of cancerous material ಎನ್ನುವಂತಹದ್ದು ಇದೆ. ಹಾಗಾಗಿ ಇದಕ್ಕೆ ವಿಶೇಷವಾದಂತಹ ಬೇಡಿಕೆ ಇದೆ. ಇದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇರುವಂತಹ ಹಿನ್ನಲೆಯಲ್ಲಿ ನಮ್ಮ ಬೆಳೆಗೆ ಮಾರುಕಟ್ಟೆಯನ್ನು ನಾವು ತಂದುಕೊಡದೆ ಇದ್ದರೆ ರೈತರು ಎಲ್ಲಿಗೆ ಹೋಗಬೇಕಾಗುತ್ತದೆ? ದಯಮಾಡಿ ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿ. ಬೇಕಾದರೆ ಈ ಬಗ್ಗೆ ಇನ್ನೊಂದು ಸಾರಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿ. ನೀವು import duty ಯ ಬಗ್ಗೆ ಅದನ್ನು ಸೇರಿಸಿ ಕೊಡಿ. ನೀವು ಈ ಬಗ್ಗೆ ಇನ್ನೊಂದು ಸಾರಿ ಪರಿಶೀಲನೆಯನ್ನು ಮಾಡಿ ಆ ರೀತಿಯಾಗಿ ಉತ್ತರವನ್ನು ಕೊಡಬೇಕು. ಇದರಲ್ಲಿ ಏನು ಮೆಸೇಜ್ ಆಗುತ್ತದೆ? ಎಲ್ಲೋ ಒಂದು ಕಡೆಗೆ ವರ್ತಕರ ಜೊತೆಗೆ ಸರ್ಕಾರ ಇದೆ ಎಂದು ಆಗುತ್ತದೆ. ದಯಮಾಡಿ ಈ ಸಂದೇಶ ಹೋಗುವುದು ಬೇಡ. ಇವತ್ತು ತಾವು ಅಧಿಕಾರದಲ್ಲಿದ್ದೀರಿ. ನಾಳೆ ದಿನ ಇನೊಬ್ಬರು ಬರುತ್ತಾರೆನ್ನುವಂತಹ ಪ್ರಶ್ನೆ ಬೇರೆ. ಇಲ್ಲಿ ವರ್ತಕರಿಗೆ ಹೆದರುವಂತಹ ಪ್ರಶ್ನೆ ಇಲ್ಲ. ಹಿಂದೆ ನಾನು ಸಚಿವನಾಗಿದ್ದಾಗ 4–5 ದಿವಸ ಇದ್ದಂತಹ ಸಂದರ್ಭದಲ್ಲಿ market intervention ಮಾಡಬೇಕಾದಂತಹ ಸಂದರ್ಭದಲ್ಲಿ ನಾವು ಎಲ್ಲಾ ದಾಲ್ ಮಿಲ್‌ಗಳನ್ನು ಕ್ಲೋಸ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಅವರು ಪರ್ಚೇಸ್ ಮಾಡುವುದಕ್ಕೆ ಬಿಡಲಿಲ್ಲ. ನಾವು market intervention ಮಾಡಿ market 10-12 ದಿವಸದಲ್ಲಿ ಜಾಸ್ತಿಯಾದ ಮೇಲೆ ತಿರುಗಿ ಅವರಿಗೆ ವಾಪಸ್ಸು ಕೊಟ್ಟು ಲಾಭವನ್ನು ನಮ್ಮ ತೊಗರಿ ಬೋರ್ಡ್ ಮಾಡಿಕೊಂಡು

ಬಂದಿದೆ. Import duty ಯಿಂದಾಗಿ ಈ ಪ್ರಶ್ನೆ ಬಂದಿದೆ ಎಂದು ನೀವು ಹೇಳುತ್ತಿರುವುದು ಅಂದರೆ, really it is an issue. ನಾನು ಇಲ್ಲಿಯವರೆಗೆ ಕೇಳಿರಲಿಲ್ಲ. ಇದರ ಬಗ್ಗೆ ನನಗೂ ಕೂಡ ಗೊತ್ತಿರಲಿಲ್ಲ. ನೀವು ಹೇಳುತ್ತಿರುವುದರಿಂದ ನನಗೆ ಅರ್ಥವಾಗಿದೆ.

I am aslo interested, we are also interested in safeguarding the interest of turdal growers. ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಚಿವರು ಈ ಬಗ್ಗೆ ಯೋಚನೆ ಮಾಡಿ. Take back this reply and give another reply. That is better. But don't admit on record that you are yeilding to this lobby of the merchants. ದಯಮಾಡಿ ಆ message ಹೋಗುವುದು ಬೇಡ. ಆಮೇಲೆ don't admit. Why do you want admit ? Government is also powerful. ಈಗ ನೀವು 4,000 ರೂಪಾಯಿಗಳನ್ನು ಏನು ಕೊಡುತ್ತೀರಿ. ಇದರಲ್ಲಿ 3,300 ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ. ನೀವು ಕೊಡುವುದು 700 ರೂಪಾಯಿಗಳು. 1000 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಹೇಳಿದ್ದೀರಿ. ದಯಮಾಡಿ ತೋರಿಸಿ. ಕಳೆದ ನಾಲ್ಕು ವರ್ಷಗಳಲ್ಲಿ 1000 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಪ್ರತಿ ಬಜೆಟ್‌ನಲ್ಲಿ ಹೇಳುತ್ತಾರಲ್ಲಾ ? ಎಷ್ಟು ಹಣ ಖರ್ಚು ಮಾಡಿದ್ದಾರೆ ? ಯಾವ್ಯಾವುದಕ್ಕೆ ಖರ್ಚು ಮಾಡಿದ್ದಾರೆ ? ಎಷ್ಟು ನಷ್ಟ ಮಾಡಿಕೊಂಡಿದ್ದಾರೆಂಬ ಬಗ್ಗೆ paper ಅನ್ನು ಸಭೆಯ ಮುಂದೆ ಮಂಡಿಸಲಿ. ಇದ್ಯಾವತ್ತೂ ಕೂಡ ಆಗಿಲ್ಲ. ಇವತ್ತು ಎಲ್ಲವನ್ನೂ ಕೂಡ ಕೇಂದ್ರ ಸರ್ಕಾರ ಭರಿಸುತ್ತದೆ ಅಷ್ಟೆ. ಇದನ್ನು ನಾಮಕಾವಸ್ಥೆಗೆ provision ಮಾಡುವುದು. ಮೊದಲನೆಯದಾಗಿ ನಾವು ಖರ್ಚು ಮಾಡುತ್ತೇವೆ. ತದನಂತರ ಕೇಂದ್ರ ಸರ್ಕಾರ ಕೊಡುತ್ತದೆ. ದಯಮಾಡಿ you take back that answer.

ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು) :- ಈಗ ನಮಗೆ ಈ ಸಮಸ್ಯೆ ಪರಿಹಾರವಾಗಬೇಕು. ನಮ್ಮ ಖಾಶಂಪೂರ್, ಡಾಕ್ಟರ್ ಶರಣ ಪ್ರಕಾಶ್ ಪಾಟೀಲ್ ಉಳಿದ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಖರೀದಿ ಪ್ರಾರಂಭವಾಗಬೇಕು. ಈಗಾಗಲೇ 11.73 ಕೋಟಿ ರೂಪಾಯಿಗಳಷ್ಟು ಖರೀದಿ ಪ್ರಾರಂಭ ಮಾಡಿದ್ದೇವೆ. ಯಾದಗಿರ್ ಹಾಗೂ ಬೀದರ್‌ಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅಲ್ಲಿ ಪ್ರಾರಂಭ ಮಾಡಿದ್ದೇವೆ. ಈಗ ಗುಲ್ಬರ್ಗಾ ಹಾಗೂ ಉಳಿದ ಕಡೆಗಳಲ್ಲಿ ಪ್ರಾರಂಭ ಮಾಡಬೇಕು. ನಮ್ಮಲ್ಲಿ ಎರಡು ಪ್ರಶ್ನೆಗಳಿವೆ. ಬೇರೆ ಬೇರೆ ರಾಜ್ಯಗಳಲ್ಲಿ ಇಲ್ಲದ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಮಾಡಿ ಬೆಳೆಯನ್ನು ಖರೀದಿ ಮಾಡುವುದನ್ನು ಪ್ರಾರಂಭ ಮಾಡಬೇಕು. ಅದು

ರೈತರ ಪರವಾಗಿ ಆಗಬೇಕು. ಶಹಾಬ್ಬಾಸ್‌ಗಿರಿಯೆಂದು ನಾನೇನೂ ಹೇಳಿಕೊಳ್ಳುವುದಿಲ್ಲ. It is our responsibility ಅದನ್ನು ನಾವು ಮಾಡಬೇಕೆಂದು ಹೇಳುವಂಥದ್ದು. ಅದನ್ನು ಈಗಾಗಲೇ ಒಂದು ಹಂತದವರೆಗೆ ಮಾಡುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಎರಡನೆಯದಾಗಿ ಈಗಿರುವಂಥದ್ದು ಏನೆಂದರೆ ಅದರಲ್ಲಿ ಬೇರೆ ಬೇರೆ ಹಂತದಲ್ಲಿರುವಂಥದ್ದು ನಮ್ಮ ಕೇಂದ್ರದಿಂದ ಆಗಬೇಕಾಗಿರುವ ಕೆಲಸ ಕಾರ್ಯದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ನಾವು ಹೇಗೂ ದೆಹಲಿಗೆ ಹೋಗುವಂಥ ಸಂದರ್ಭದಲ್ಲಿ ತೊಗರಿಯನ್ನು ಒಂದು issue ಮಾಡಿ ಕೇಂದ್ರದಲ್ಲಿ ತೆಗೆದುಕೊಳ್ಳೋಣ. ಖಾಶಂಪೂರ್‌ರವರೇ ಒಂದು ನಿಮಿಷ. ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯ ಉದ್ದೇಶವೇನು ? ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಲ್ಲಿ ನಾವು ಒಂದಷ್ಟು ಮಾರುಕಟ್ಟೆಯಲ್ಲಿ ಧಾರಣೆಯನ್ನು ಏರಿಸಲಿಕ್ಕೆ intervene ಆಗಬೇಕು. ಈಗಾಗಲೇ 11.73 ಕೋಟಿ ರೂಪಾಯಿಗಳಷ್ಟು ಈಗ ಖರೀದಿ ಮಾಡಿದರೂ ಕೂಡ ಮಾರುಕಟ್ಟೆಯಲ್ಲಿ ಏನು ಏರುಪೇರುಗಳು ಹೆಚ್ಚಾಗಲಿಲ್ಲ. ಇದಕ್ಕೆ ಕಾರಣವನ್ನು ನಾವು ವಿಶ್ಲೇಷಣೆಯನ್ನು ಮಾಡಿದ್ದೇವೆ. ನೀವು ಕೇಳಬಹುದು. ಮಧ್ಯವರ್ತಿಗಳನ್ನು ನಿಲ್ಲಿಸುವುದು ಸರ್ಕಾರದ ಜವಾಬ್ದಾರಿ ಅಲ್ಲವೇ ? ಏನು ಖರೀದಿ ಮಾಡಿದ್ದನ್ನು ಬೇರೆ ಬೇರೆ ರೀತಿಯಲ್ಲಿ ರೈತರ ಬದಲು ಮಧ್ಯವರ್ತಿಗಳೇ ಇದನ್ನು ಒಂದು ರೀತಿಯಲ್ಲಿ ತರುವಂಥದ್ದು ಮಾಡುತ್ತಾರೆಂಬುದು ನಮ್ಮ ಗಮನಕ್ಕೆ ಬಂದಿದೆ. ಇದು ಎಷ್ಟರಮಟ್ಟಿಗೆ ಸರಿ ತಪ್ಪು ಎಂದು ನಾವು ಈಗ ಅದನ್ನೇ ಮಾತನಾಡಿಕೊಂಡು ಹೋಗುವುದು ಸೂಕ್ತವಲ್ಲ. We need a solution. For that reason we should initiate the Market Intervention Scheme again. That is our demand. ಈಗ ನಾವು 10 ಕೋಟಿ ರೂಪಾಯಿಗಳನ್ನು ಮತ್ತೆ ಬಂಡವಾಳ ಹಾಕಿ ಬೆಳೆಯನ್ನು ಖರೀದಿ ಮಾಡಲಿಕ್ಕೆ ಪ್ರಾರಂಭ ಮಾಡುತ್ತೇವೆ. ಎಲ್ಲೆಲ್ಲಿ ಈ ರೀತಿ ಮಧ್ಯವರ್ತಿಗಳು, ಮತ್ತೊಬ್ಬರು ಬೇರೆ ಬೇರೆ ಕಡೆಯಿಂದ ತಂದು ಅದನ್ನು ದುರುಪಯೋಗ ಮಾಡುತ್ತಾರೆಂದು ಹೇಳುವುದರ ಬಗ್ಗೆ ನಮ್ಮ ಸರ್ಕಾರ. ನಮ್ಮ ಇಲಾಖೆ ನಿಗಾವಹಿಸುವಂಥ ಕೆಲಸವನ್ನು ಮಾಡುತ್ತೇವೆ. ಅದಕ್ಕಾಗಿ ಈಗ 10 ಕೋಟಿ ರೂಪಾಯಿಗಳಿಂದ ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿ ಮುಂದುವರೆಸೋಣ. ನಿಮ್ಮ ಬೇಡಿಕೆಗಳ ಬಗ್ಗೆ ನಮ್ಮ ಸರ್ಕಾರ ಸ್ಪಂದಿಸುತ್ತಿದೆ. ಎಲ್ಲೋ ಸಣ್ಣ ಪುಟ್ಟ ಹೇಳಿಕೆಗಳು. ಕೇಳಿಕೆಗಳಿಗಿಂತ ಹೆಚ್ಚಿನ ರೀತಿಯಲ್ಲಿ ರೈತರ ಹಿತಾಸಕ್ತಿಯನ್ನು ಕಾಪಾಡುವಂಥ 10 ಕೋಟಿ ರೂಪಾಯಿಗಳನ್ನು intervene ಮಾಡಿ ಪ್ರಾರಂಭ ಮಾಡೋಣ. ಇದಕ್ಕೆ ತಾವೆಲ್ಲಾ ಸಹಕರಿಸಿ. ಮುಂದಿನ ಹೆಜ್ಜೆ

ಯಾವ ರೀತಿ ಇಡಬೇಕು ಎಂಬ ಬಗ್ಗೆ ನಾವು ನೀವು ಉಮೇಶ್ ಕತ್ತಿಯವರು ಕುಳಿತುಕೊಂಡು ಮಾತನಾಡುವಂಥ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

ಅಧ್ಯಕ್ಷರು :– ಆಯಿತು, ಈಗ ವಿತ್ತೀಯ ಕಾರ್ಯಕಲಾಪ.

ಶ್ರೀ ಸಿದ್ದರಾಮಯ್ಯ :– ಪುನಃ ತೊಗರಿ ಬೆಳೆಯನ್ನು ಖರೀದಿ ಪ್ರಾರಂಭ ಮಾಡುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಅದನ್ನು ನಾವು 10 ಕೋಟಿ, 11 ಕೋಟಿ ರೂಪಾಯಿಗಳಿಗೆ, 9 ಕೋಟಿ ರೂಪಾಯಿಗಳಿಗೆ ನಿಲ್ಲಿಸಿಬಿಡುತ್ತೇವೆ ಎಂದು ಹೇಳುವುದಕ್ಕೆ ಹೋಗುವುದು ಬೇಡ. ಈಗ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದನ್ನು ತೆಗೆದುಕೊಳ್ಳಲಿ. ಅವತ್ತಿನವರೆಗೆ ರೈತರು ಏನಾದರೂ ಬೆಲೆ ಜಾಸ್ತಿಯಾಗಿ ನೀವು ನಿಲ್ಲಿಸುವುದಾದರೆ ನಿಲ್ಲಿಸಲಿ. ತೆಗೆದುಕೊಳ್ಳುವುದು ಬೇಡ. ಇದು ಒಂದು ಭಾಗ, ಎರಡನೆಯದು ಒಂದು ವೇಳೆ ಬೆಲೆ ಏರಿಲಿಲ್ಲವೆಂದು ಇಟ್ಟುಕೊಳ್ಳೋಣ. ಆಗ ಖರೀದಿ ಮಾಡುವುದನ್ನು ಮುಂದುವರೆಸ–ಬೇಕಾಗುತ್ತದೆ. ರೈತರು ಎಲ್ಲಿಯವರೆಗೆ ಬೆಳೆದಿದ್ದಾರೆ. ಕೃಷಿ ಇಲಾಖೆಯವರಿಗೆ ಈ ವರ್ಷ ಎಷ್ಟು ಕ್ವಿಂಟಾಲ್‌ವರೆಗೆ ಬೆಳೆದಿದ್ದಾರೆಂಬುದು ನಿಮಗೂ ಗೊತ್ತಿದೆ. ಎಷ್ಟು ಕ್ವಿಂಟಾಲ್ ಖರೀದಿ ಮಾಡಿದ್ದೀರಿ ಎಂಬುದು ಗೊತ್ತಿದೆ. ರೈತರ ಹತ್ತಿರ ಇನ್ನೆಷ್ಟು ಕ್ವಿಂಟಾಲ್ ಇದೆ ಎಂಬುದು ಗೊತ್ತಿದೆ. ದಲ್ಲಾಳಿಗಳು ಎಷ್ಟು ತೆಗೆದುಕೊಂಡಿರಬಹುದೆಂಬುದು ಗೊತ್ತಿದೆ. ಅದಕ್ಕೆ ನಾನು ಹೇಳುವುದೇನೆಂದರೆ ಕೇಂದ್ರ ಸರ್ಕಾರ ಆಮದು ಮಾಡಿಕೊಳ್ಳುತ್ತಿದ್ದರೆ ಅವರಿಗೂ ಹೋಗಿ ಹೇಳೋಣ. ನಾವೂ ಬರುತ್ತೇವೆ. ಕೇಂದ್ರ ಕೃಷಿ ಸಚಿವರಾದ ಶ್ರೀ ಪವಾರ್‌ರವರನ್ನು ಭೇಟಿ ಮಾಡಿ ಅವರಿಗೂ ಸಹ ಮನದಟ್ಟು ಮಾಡೋಣ. ಇದು ಒಂದು ಭಾಗ. ಎರಡನೆಯದು ನೀವು ಒಂದು ಸಾವಿರ ಕೋಟಿ ರೂಪಾಯಿಗಳನ್ನು market intervention ಹೋದ ವರ್ಷವೂ ಇಟ್ಟಿದ್ದೀರಿ. ಈ ವರ್ಷವೂ ಇಟ್ಟಿದ್ದೀರಿ. ನನ್ನ ಪ್ರಕಾರ ಇವತ್ತಿನವರೆಗೆ ಅದರಲ್ಲಿ 200–300 ಕೋಟಿ ರೂಪಾಯಿಗಳೂ ಸಹ ಖರ್ಚಾಗಿಲ್ಲ. I know that ಅದನ್ನು ಖರ್ಚು ಮಾಡಿಲ್ಲ. ಇಲ್ಲಿಯವರೆಗೆ 200 ಕೋಟಿ ರೂಪಾಯಿಗಳು ಖರ್ಚಾಗಿಲ್ಲ. ಸುಮ್ಮನೆ 1000 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ allocate ಮಾಡಿಕೊಂಡು ಬಿಟ್ಟಿದ್ದಾರೆ. ಹಾಗಾದರೆ ಇವತ್ತಿನವರೆಗೆ ಈರುಳ್ಳಿ, ಆಲೂಗಡ್ಡೆ, ತೊಗರಿ, ಭತ್ತ ಬೆಳೆಗಳನ್ನು ಎಷ್ಟೆಷ್ಟು ಖರೀದಿ ಮಾಡಿದ್ದೀರಿ ? ಎಷ್ಟು ರೂಪಾಯಿಗಳಾಗಿವೆ. ಅದರ ವಿವರ ಕೊಡಿ. ಸದನದ ಮುಂದೆ ಆ ವಿವರವನ್ನು ಇಡಿ. 1000 ಕೋಟಿ ರೂಪಾಯಿಗಳಲ್ಲಿ ಬಜೆಟ್ allocation ನಲ್ಲಿ ಎಷ್ಟೆಷ್ಟು ಖರೀದಿ ಮಾಡಿದ್ದೀರಿ ಅದನ್ನೆಲ್ಲಾ ಇಡಿ. ಏಕೆ ನೀವು 1000 ಕೋಟಿ ರೂಪಾಯಿಗಳನ್ನು Market

Intervention Scheme ಗೆ ಇಡುವುದು ಏಕೆಂದರೆ ರೈತರು ಬೆಳದಂಥ ಪದಾರ್ಥಗಳಿಗೆ ನ್ಯಾಯಯುತವಾದಂಥ ಬೆಲೆ ಸಿಗಬೇಕು. ಬೆಲೆ ಕುಸಿತವಾದಾಗ ರೈತರ ಸಹಾಯಕ್ಕೆ ಹೋಗಬೇಕೆನ್ನುವ ಕಾರಣಕ್ಕೋಸ್ಕರ. ಎಲ್ಲಿಯವರೆಗೆ ಅವರ ನೆರವಿಗೆ ಹೋಗಬೇಕು? ಬೆಲೆ ಮಾರುಕಟ್ಟೆಯಲ್ಲಿ stabilize ಆಗುವವರೆಗೆ ಅವರ ನೆರವಿಗೆ ಹೋಗಬೇಕು. ಇದು ಆ ಯೋಜನೆಯ ಉದ್ದೇಶ. ಈ ಉದ್ದೇಶದಿಂದ ನಾನೇ ಈ ಯೋಜನೆಯನ್ನು introduce ಮಾಡಿದ್ದೇವೆ. ನೀವೂ ಇದ್ದಿರಿ. ಪಟೇಲರು ಇರುವಾಗ ಈಗಾಗಲೇ ಬದಲಾವಣೆ ಆಗುವುದೇ? ಈ ಕಡೆ ಇದ್ದಾಗ ಒಂದು ತರಹ. ಆ ಕಡೆ ಇದ್ದಾಗ ಒಂದು ತರಹವೇ? Permanent ಆಗಿ ಅಲ್ಲೇ ಇರಿ. ನಾನು ಬೇಡವೆನ್ನುವುದಿಲ್ಲ. ನನಗೆ ಸಂತೋಷ, ನೀವೂ ಯಾವಾಗಲೂ ರೂಲಿಂಗ್ ಪಾರ್ಟಿಯಲ್ಲೇ ಇರಿ. You are my good friend, be there. ನಮಗೆ ಗೊತ್ತಿಲ್ಲವೇ ನಿಮ್ಮ ರೂಲಿಂಗ್ ಹೇಗೆ ಬರುತ್ತದೆ ಎಂದು. ಆದ್ದರಿಂದ ನಾನು ಹೇಳಿಲ್ಲ. ಅವರು Permanent ಆಗಿ ಇಲ್ಲೇ ಇರುತ್ತೇವೆಂದರೆ ನಾನು ಏನು ಹೇಳಬೇಕು ಹೇಳಿ. ಇರಲಿ, ನಾವೇನು ಬೇಡವೆನ್ನುವುದಿಲ್ಲ. ನಾವು ಬಂದಾಗಲೂ ಅಲ್ಲೇ ಇರಿ. ಇವರು ಬಂದಾಗಲೂ ಅಲ್ಲೇ ಇರಿ ಎಂದು ಹೇಳುತ್ತಿದ್ದೇನೆ. ಇದರಲ್ಲಿ ತಪ್ಪೇನಿದೆ. Next ನಾವು ಬರುತ್ತೇವೆ. ಅಲ್ಲೇ ಇರಿ ಬೇಡವೆಂದವರು ಯಾರು ? ಈಗ ಚಿಕ್ಕಮಗಳೂರಿನಲ್ಲಿ ಚೆನ್ನಾಗಿ ಗೊತ್ತಾಗಿದೆಯೆಲ್ಲಾ ? ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಅವರು ಈಗ ಖರೀದಿ ಮಾಡುವುದಕ್ಕೆ ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಎಷ್ಟು ರೈತರು ಮಾರಾಟ ಮಾಡಲಿಕ್ಕೆ ಬರುತ್ತಾರೆ. ಬೆಲೆ ಎಲ್ಲಿಯವರೆಗೆ ಏರುತ್ತದೆ ಅಲ್ಲಿಯವರೆಗೆ ಖರೀದಿ ಮಾಡಲಿ. ನಾವು ಈ ಬಗ್ಗೆ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಲಿಕ್ಕೆ ದಿನಾಂಕ ನಿಗದಿ ಮಾಡಿ ಅವರ appointment ತೆಗೆದುಕೊಳ್ಳಬೇಕು. We are also coming. We will also put pressure on the Government of India. ನಮಗೆ ಕರ್ನಾಟಕ ರಾಜ್ಯದ ರೈತರ ಹಿತ ಮುಖ್ಯ ರೈತರ ಕಷ್ಟ ಬಗೆಹರಿಸಬೇಕಾಗಿರುವುದು ಬಹಳ ಮುಖ್ಯ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ನಮಗೆ ಬಹಳ ಮುಖ್ಯವಲ್ಲ. ಇಲ್ಲಿ ರೈತರ ಸಮಸ್ಯೆ ಬಗೆಹರಿಯಬೇಕು. ಯಾರೋ ದಲ್ಲಾಳಿಗಳು ರೈತರನ್ನು ದುರುಪಯೋಗಪ–ಡಿಸಿಕೊಂಡು ಬೆಳೆ ಖರೀದಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರಲ್ಲಾ ಅವರ ಮೇಲೆ raid ಮಾಡಿ, criminal cases ಹಾಕಿ ಇಲ್ಲಿಯವರೆಗೆ ಯಾವುದಾದರೂ ಒಂದು ರೈಡ್ ಮಾಡಿರುವಿರಾ ? ಅವರ ಮಾಲನ್ನೆಲ್ಲಾ seize ಮಾಡಿ. ಮುಟ್ಟುಗೋಲು

ಹಾಕಿಕೊಳ್ಳಿ. ಅದನ್ನು ಬಿಟ್ಟು ದಲ್ಲಾಳಿಗಳು ತೆಗೆದುಕೊಳ್ಳುತ್ತಾರೆ ಇವರೆಲ್ಲಾ ಅಲ್ಲಿಗೆ ಹೋಗುತ್ತಾರೆ ಎಂದು ಹೇಳಿದರೆ ಈ ಸರ್ಕಾರದ ಅಸಹಾಯಕತೆ ತೋರಿಸಿದಂತಾಗುತ್ತದೆ. You have got all the powers. Exercise your powers. Stop all these non-sense.

ಅಧ್ಯಕ್ಷರು : ಆಯಿತು.

ಶ್ರೀ ಸಿ.ಎಸ್. ಪುಟ್ಟೇಗೌಡ :– ನೀವೂ ಒಬ್ಬರು ಬಲಾಢ್ಯ ಮಂತ್ರಿಗಳು, ನೀವೂ ನಮಗೆಲ್ಲಾ ರಕ್ಷಣೆ ಕೊಡುತ್ತೀರಿ. ನಮ್ಮ ಎಲ್ಲಾ ಸಮಸ್ಯೆಗಳು ಗೊತ್ತಿರುವಂಥ ಕತ್ತಿಯವರು ನಮ್ಮ ಜೊತೆಯಲ್ಲಿ ಇದ್ದವರು. ನಮ್ಮ ಭಾಗದಲ್ಲಿ ಆಲೂಗಡ್ಡೆ ಬೆಳೆದವರ ಸ್ಥಿತಿ ಕೂಡ ಇದಕ್ಕಿಂತ ತುಂಬಾ ಕೆಟ್ಟ ಸ್ಥಿತಿ ಇದೆ. ಅವರೇ ಬಂದು ಕಳೆದ ಬಾರಿ ಎರಡು ಮೂರು ಸಲ meeting ಮಾಡಿ ಅಲ್ಲಿ ಬರುವಂಥ ಬೆಳೆ ರೋಗ. ಸಮಸ್ಯೆಯನ್ನೆಲ್ಲಾ ತಿಳಿದಿದ್ದಾರೆ. ರೇಟ್ ಕೂಡ ಬಿದ್ದು ಹೋಗಿದೆ. ಅದು intervene ಆಗುವುದು, ತಮಗೆಲ್ಲಾ ಆಗಲಿಲ್ಲ. ಶುಂಠಿ ಬೆಳೆಗಾರರಿಗೂ ಬಹಳ ಕೆಟ್ಟ ಸ್ಥಿತಿ ಇದೆ. ತೊಗರಿ ಬೆಳೆಗಾರರನ್ನು ಕೇಳುವವರೆ ಇಲ್ಲ. ಈಗ 25 ವರ್ಷಗಳಿಂದ ಯಾವ ಬೆಲೆಯಿತ್ತೋ ಇವತ್ತಿಗೂ ಅದೇ ಬೆಲೆ ಇದೆ. ದಯಮಾಡಿ ಸರ್ಕಾರ ಇದರಲ್ಲಿ ಅತ್ಯಂತ ಕಾಳಜಿ ತೋರಿಸಬೇಕು.

ಅಧ್ಯಕ್ಷರು :– ಈಗ ವಿತ್ತೀಯ ಕಲಾಪ.

ಡಾ॥ ಶರಣ ಪ್ರಕಾಶ್ ಪಾಟೀಲ್ :– Clarification ಇದೆ.

ಅಧ್ಯಕ್ಷರು :– Clarification ಬೇಡ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ ಮತ್ತೆ Clarification ಕೇಳಿದರೆ ಹೇಗೆ ? ಮಂತ್ರಿಗಳು ಖರೀದಿ ಮಾಡುತ್ತೇವೆಂದು ಹೇಳಿದ್ದಾರಲ್ಲ ? No ವಿತ್ತೀಯ ಕಲಾಪ ಪ್ರಾರಂಭ ಮಾಡಿ. ವಿರೋಧ ಪಕ್ಷದ ನಾಯಕರು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆ ಕೊಟ್ಟಿದ್ದೆ. ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರಲ್ಲ. ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು :– ಅವರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಐದು ನಿಮಿಷ. ಮುಗಿಸಿಬಿಡಿ.

ಶ್ರೀ ಸಿದ್ದರಾಮಯ್ಯ :– ನೀವು ಹೇಗೆ ಹೇಳುತ್ತೀರೋ ಹಾಗೆ ? ಏಕೆಂದರೆ ಸಮಯ ಹೋಗಿ ಬಿಡುತ್ತದೆಯಲ್ಲವೇ ? ಅದಕ್ಕೋಸ್ಕರ I am ready ನನಗೇನಿಲ್ಲ. ಐದು ನಿಮಿಷ ಇಲ್ಲದಿದ್ದರೆ ಹತ್ತು ನಿಮಿಷ ಆಗಲಿ. But ನಾನು ರೆಡಿಯಾಗಿದ್ದೇನೆ.